ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 851

ಉತ್ತರಿಸುವ ದಿನಾಂಕ : 21.02.2018

ಸದಸ್ಯರ ಹೆಸರು : ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಮಾನ್ಯ ಮೀನುಗಾರಿಕೆ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು.

ಕ್ರಸಂ.	ಪ್ರಶ್ನೆ	ಉತ್ತರ
ಅ)	ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖಯು ಕಳೆದ 3 ವರ್ಷಗಳಿಂದ ಕ್ರೀಡಾಪಟುಗಳಿಗಾಗಿ ಖರೀದಿಸಲಾದ ಕ್ರೀಡಾ ಹಾಗೂ ಇತರೆ ಸಾಮಾಗ್ರಿಗಳು ಯಾವುವು; (ಸಾಮಾಗ್ರಿವಾರು, ವರ್ಷಾವಾರು ಸಂಪೂರ್ಣ ವಿವರ ನೀಡುವುದು)	ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಕಳೆದ 3 ವರ್ಷಗಳಲ್ಲಿ ಕ್ರೀಡಾಪಟುಗಳಿಗಾಗಿ ಖರೀದಿಸಲಾದ ಕ್ರೀಡಾ ಹಾಗೂ ಇತರೆ ಸಾಮಗ್ರಿಗಳ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.
ಆ)	ಸದರಿ ಸಾಮಾಗ್ರಿಗಳ ಖರೀದಿಗಾಗಿ ಟೆಂಡರ್ ಕರೆಯಲಾಗಿದೆಯೇ; ಕರೆದಿದ್ದಲ್ಲಿ, ಟೆಂಡರ್ ಅಧಿಸೂಚನೆ ದಿನಾಂಕ ಹಾಗೂ ಟೆಂಡರ್‌ನಲ್ಲಿ ಭಾಗವಹಿಸಿದ ಸಂಸ್ಥೆಗಳ ಸಂಪೂರ್ಣ ವಿವರ ನೀಡುವುದು;	ಸದರಿ ಸಾಮಗ್ರಿಗಳ ಖರೀದಿ ವಿವರಗಳನ್ನು ಈ ಕೆಳಕಾಣಿಸಿದೆ. __ಧಾರವಾಡ ಜಿಲ್ಲೆ.__ ಟೆಂಡರ್ ಕರೆದಿರುವುದಿಲ್ಲ. ದರಪಟ್ಟಿ ಆಹ್ವಾನಿಸಿ ಕಡಿಮೆ ದರ ನಮೂದಿಸಿದವರಲ್ಲಿ ಖರೀದಿಸಲಾಗಿದೆ. __ಗದಗ ಜಿಲ್ಲೆ.__ ದರಪಟ್ಟಿ ಆಹ್ವಾನಿಸಿ ಸಾಮಗ್ರಿಗಳನ್ನು ಖರೀದಿಸಲಾಗಿದೆ. __ಹಾವೇರಿ ಜಿಲ್ಲೆ:__ ದರಪಟ್ಟಿಗಳ ಆಧಾರದ ಮೇಲೆ ಶ್ರೀಕಾಂತ ಸ್ಪೋರ್ಟ್ಸ್, . ಹಾವೇರಿ ಮತ್ತು ಜನತಾ ಬಜಾರ ಹಿರೇಕೆರೂರು ಇವರಿಂದ ಖರೀದಿಸಿ ಸರಬರಾಜು ಮಾಡಲಾಗಿದೆ. ಟೆಂಡರ ಕರೆದಿರುವುದಿಲ್ಲ.
ಇ)	ಸಾಮಾಗ್ರಿಗಳ ಖರೀದಿಗಾಗಿ ಕಳೆದ 3 ವರ್ಷಗಳಲ್ಲಿ ತಗುಲಿದ ವೆಚ್ಚ ಎಷ್ಟು ಮತ್ತು ಯಾವ ಸಂಸ್ಥೆಯಿಂದ ಖರೀದಿ ಮಾಡಲಾಗಿದೆ: (ವರ್ಷಾವಾರು ಸಂಪೂರ್ಣ ವಿವರ ನೀಡುವುದು)	ಸಾಮಗ್ರಿಗಳ ಖರೀದಿಗೆ ತಗುಲಿದ ವೆಚ್ಚದ ವಿವರಗಳನ್ನು ಈ ಕೆಳಕಾಣಿಸಿದೆ. __ಧಾರವಾಡ ಜಿಲ್ಲೆ.__ ಕಳೆದ 3 ವರ್ಷಗಳಲ್ಲಿ ಸಾಮಗ್ರಿಗಳನ್ನು ಖರೀದಿಸಲು ಒಟ್ಟು ರೂ78,531/-ಗಳ ವೆಚ್ಚ ಭರಿಸಲಾಗಿದೆ ಹಾಗೂ ಈ ಸಾಮಗ್ರಿಗಳನ್ನು ಮೆ. ಗುರುದತ್ತ ಟ್ರೇಡರ್ಸ, ಧಾರವಾಡ ಸಂಸ್ಥೆಯವರಿಂದ ಖರೀದಿಸಲಾಗಿದೆ. __ಗದಗ ಜಿಲ್ಲೆ:__ 2015-16 - ರೂ.25,000-00 2016-17 - ರೂ.1.00 ಲಕ್ಷ 2017-18 - ರೂ.1.07 ಲಕ್ಷ __ಹಾವೇರಿ ಜಿಲ್ಲೆ:__ ಕಳೆದ 3 ವರ್ಷಗಳಲ್ಲಿ ಕ್ರಮ ಸಂಖ್ಯೆ (ಅ) ರಲ್ಲಿ ನಮೂದಿಸಿದಂತೆ 2014-15 ನೇ ಸಾಲಿನಲ್ಲಿ ರೂ.1,44,000=00, 2015-16 ನೇ ಸಾಲಿನಲ್ಲಿ ರೂ.1,47,000=00 ಮತ್ತು 2016-17 ನೇ ಸಾಲಿನಲ್ಲಿ ರೂ.2,99,355=00ಗಳು ಒಟ್ಟು ರೂ.5,90,355=00ಗಳ ಸಾಮಾಗ್ರಿಗಳನ್ನು ಖರೀದಿಸಿ ಸರಬರಾಜು ಮಾಡಲಾಗಿದ್ದು, ಸಂಪೂರ್ಣವಾಗಿ ಉದ್ದೇಶಿತ ಕಾರ್ಯಕ್ಕಾಗಿ ಬಳಕೆಯಾಗಿರುತ್ತವೆ.

<table>
<tr>
<td>ಈ)</td>
<td>ಸದರಿ ಖರೀದಿಸಲಾದ ಸಾಮಾಗ್ರಿಗಳು ಇಲ್ಲಿಯವರೆಗೆ ಬಳಕೆಯಾಗದೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ: ಇದ್ದರೆ, ಬಳಕೆ ಮಾಡದೆ ಇರುವುದಕ್ಕೆ ಕಾರಣವೇನು: (ಸಂಪೂರ್ಣ ವಿವರ ನೀಡುವುದು)</td>
<td>ಸದರಿ ಖರೀದಿಸಲಾದ ಸಾಮಗ್ರಿಗಳ ಬಳಕೆಯ ವಿವರ ಈ ಕೆಳಕಾಣಿಸಿದೆ.
<u>ಧಾರವಾಡ ಜಿಲ್ಲೆ:</u>
ಖರೀದಿಸಲಾದ ಸಾಮಗ್ರಿಗಳನ್ನು ಕ್ರೀಡಾ ವಸತಿಶಾಲೆಯ ಕ್ರೀಡಾಪಟುಗಳಿಗೆ ದೈನಂದಿನ ಉಪಯೋಗಕ್ಕಾಗಿ ಬಳಕೆ ಮಾಡಲಾಗಿದೆ.
<u>ಗದಗ ಜಿಲ್ಲೆ:</u>
ಸದರಿ ಸಾಮಗ್ರಿಗಳು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗುತ್ತಿವೆ.
<u>ಹಾವೇರಿ ಜಿಲ್ಲೆ:</u>
ಖರೀದಿಸಿದ ಸಾಮಗ್ರಿಗಳನ್ನು ಸಂಪೂರ್ಣವಾಗಿ ಉದ್ದೇಶಿತ ಕಾರ್ಯಕ್ಕಾಗಿ ಬಳಕೆಯಾಗಿರುತ್ತವೆ.</td>
</tr>
<tr>
<td>ಉ)</td>
<td>ಸದರಿ ಕ್ರೀಡಾಪಟುಗಳಿಗೆ ತರಬೇತುದಾರರನ್ನು ನೇಮಕ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಇದ್ದರೆ, ಯಾವ ಕಾಲಮಿತಿಯೊಳಗೆ ತರಬೇತುದಾರರನ್ನು ನೇಮಕ ಮಾಡಲಾಗುವುದು? (ಸಂಪೂರ್ಣ ವಿವರ ನೀಡುವುದು)</td>
<td>ಧಾರವಾಡ ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಕ್ರೀಡಾಪಟುಗಳ ದೈನಂದಿನ ತರಬೇತಿಗಾಗಿ ಈ ಕೆಳಕಂಡಂತೆ ಕ್ರೀಡಾ ತರಬೇತುದಾರರ ಸೇವೆಯನ್ನು ಒದಗಿಸಲಾಗಿದೆ.
<u>ಧಾರವಾಡ ಜಿಲ್ಲೆ:</u>
<table>
<tr><th>ಕ್ರಸ</th><th>ಕ್ರೀಡೆ</th><th>ತರಬೇತುದಾರರ ಸಂಖ್ಯೆ</th></tr>
<tr><td>1</td><td>ವಾಲಿಬಾಲ್ ತರಬೇತುದಾರರು</td><td>02</td></tr>
<tr><td>2</td><td>ಬಾಸ್ಕೆಟ್‌ಬಾಲ್ ತರಬೇತುದಾರರು</td><td>01</td></tr>
<tr><td>3</td><td>ಸೈಕ್ಲಿಂಗ್ ತರಬೇತುದಾರರು</td><td>01</td></tr>
<tr><td>4</td><td>ಅಥ್ಲೆಟಿಕ್ಸ್ ತರಬೇತುದಾರರು</td><td>01</td></tr>
<tr><td>5</td><td>ಹಾಕಿ ತರಬೇತುದಾರರು</td><td>01</td></tr>
</table>
<u>ಗದಗ ಜಿಲ್ಲೆ:</u>
<table>
<tr><th>ಕ್ರಸ</th><th>ಕ್ರೀಡೆ</th><th>ತರಬೇತುದಾರರ ಸಂಖ್ಯೆ</th></tr>
<tr><td>1</td><td>ಕುಸ್ತಿ ತರಬೇತುದಾರರು</td><td>01</td></tr>
<tr><td>2</td><td>ಹಾಕಿ ತರಬೇತುದಾರರು</td><td>01</td></tr>
<tr><td>3</td><td>ಸೈಕ್ಲಿಂಗ್ ತರಬೇತುದಾರರು</td><td>01</td></tr>
</table>
ಹಾವೇರಿ ಜಿಲ್ಲೆಯಲ್ಲಿ ಒಬ್ಬರು ವಾಲಿಬಾಲ್ ತರಬೇತುದಾರರ ಸೇವೆ ಒದಗಿಸಲಾಗಿರುತ್ತದೆ.
ಅಲ್ಲದೆ, ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ತರಬೇತುದಾರರ ಸೇವೆಯನ್ನು ಪಡೆಯುವ ಬಗ್ಗೆ ಆಯ್ಕೆ ಪ್ರಕ್ರಿಯೆ ಈಗಾಗಲೇ ಕೈಗೊಂಡಿದ್ದು, ಹೆಚ್ಚುವರಿ ತರಬೇತುದಾರರ ಸೇವೆಯನ್ನು ಶೀಘ್ರ, ಆದ್ಯತೆಯ ಮೇಲೆ ತರಬೇತುದಾರರ ಕೊರತೆ ಇರುವ ಜಿಲ್ಲಾ ಕ್ರೀಡಾ ವಸತಿ ಶಾಲೆಗಳಿಗೆ ಒದಗಿಸಲಾಗುವುದು.</td>
</tr>
</table>

ಸಂಖ್ಯೆ: ಯುಸೇಇ 26 ಯುಸೇಭಾ 2018.

(ಪ್ರಮೋದ್ ಮಧ್ವರಾಜ್)
ಮೀನುಗಾರಿಕೆ, ಯುವ ಸಬಲೀಕರಣ
ಹಾಗೂ ಕ್ರೀಡಾ ಸಚಿವರು.

ಅನುಬಂಧ-1

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 851 ಕ್ಕೆ ಮಾಹಿತಿ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಿಂದ ಕ್ರೀಡಾಪಟುಗಳಿಗಾಗಿ ಖರೀದಿಸಲಾದ ಕ್ರೀಡಾ ಹಾಗೂ ಇತರೆ ಸಾಮಗ್ರಿಗಳ ವಿವರಗಳು

ಕ್ರ. ಸಂ	ವರ್ಷ	ಖರೀದಿಸಲಾದ ಸಾಮಗ್ರಿಗಳು	ಮೊತ್ತ
		1. ಧಾರವಾಡ ಜಿಲ್ಲೆ: ಧಾರವಾಡ ಜಿಲ್ಲೆಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಕಳೆದ 3 ವರ್ಷಗಳಲ್ಲಿ ಕ್ರೀಡಾ ವಸತಿನಿಲಯದ ಕ್ರೀಡಾಪಟುಗಳಿಗೆ ಈ ಕೆಳಗಿನ ಸಾಮಗ್ರಿಗಳನ್ನು ಖರೀದಿಸಲಾಗಿದೆ.	
1	2014-15	ಡೆಟಾಲ್ ಸೋಪು ಕೋಲ್ಗೇಟ್ ಪೇಸ್ಟ ಸರ್ಫ಼ಎಕ್ಸೆಲ್ ಪೌಡರ್ ಸರ್ಫ಼ಎಕ್ಸೆಲ್ ಸೋಪು ಫೀನೈಲ್ & ಮೋಪ್	ರೂ.21,788/-
2	2015-16	--ಸದರ--	ರೂ.24,100/-
3	2016-17	--ಸದರ--	ರೂ.32,643/-
		ಒಟ್ಟು	**ರೂ.78,531/-**
		2. ಗದಗ ಜಿಲ್ಲೆ:	
4	2015-16	ಹಾಕಿ ಬಾಲ್, ಹಾಕಿ ಸ್ಟಿಕ್, ಕುಸ್ತಿ ಶೂಸ್.	ರೂ24,000/-
5	2016-17	1. 40 ಜೊತೆ ಕುಸ್ತಿ ಶೂಗಳು. 2. ಫುಟ್‌ಬಾಲ್, ವಾಲಿಬಾಲ್, ಬಾಸ್ಕೆಟ್‌ಬಾಲ್, ಸೈಕಲ್ ಟಿಯರ್, ಸೈಕಲ್ ಟ್ಯೂಬ್, ಪಂಚರ್ ಕಿಟ್, ಸೈಕಲ್ ಪೆಡಲ್	ರೂ.25,000/- ರೂ.25,000/-
6	2017-18	1. ಸೈಕ್ಲಿಂಗ್ ಕ್ರೀಡಾಪಟುಗಳಿಗೆ ಟೈಯರ್ & ಟ್ಯೂಬ್. 2. ಕುಸ್ತಿ ಕ್ರೀಡಾಪಟುಗಳಿಗೆ 22 ಜೊತೆ ಕುಸ್ತಿ ಶೂ, ಹಾಕಿ ಕ್ರೀಡಾಪಟುಗಳಿಗೆ ಹಾಕಿ ಸ್ಟಿಕ್, ಹಾಕಿ ಕವರ್, ವ್ಹಾಲಿವಾಲ್,ವ್ಹಾಲಿ ಬಾಲ್ ನೆಟ್, ಥ್ರೋಬಾಲ್, ಹ್ಯಾಂಡಬಾಲ್, ಸ್ಕಿಪಿಂಗ್ ರೋಪ್ ಟ್ರ್ಯಾಕ್‌ಸೂಟ್ 63 ಜೊತೆ	ರೂ28,983/- ರೂ.78,000/-
		3. ಹಾವೇರಿ ಜಿಲ್ಲೆ: ಹಾವೇರಿ ಜಿಲ್ಲೆಯ 7 ತಾಲ್ಲೂಕುಗಳಲ್ಲಿರುವ ಶಾಲೆಗಳಲ್ಲಿರುವ ಕ್ರೀಡಾಪಟುಗಳ ದೈನಂದಿನ ತರಬೇತಿಗಾಗಿ ಕ್ರೀಡಾ ಸಾಮಾಗ್ರಿಗಳನ್ನು 2205-00-104-0-33 ಕ್ರೀಡಾ ಸಾಮಾಗ್ರಿಗಳನ್ನು ಕೊಳ್ಳಲು ಮತ್ತು ಆಟದ ಮೈದಾನಗಳನ್ನು ಅಭಿವೃದ್ಧಿಗೊಳಿಸಲು ಶೈಕ್ಷಣಿಕ ಮತ್ತು ಇತರೆ ಸಂಸ್ಥೆಗಳಿಗೆ ಸಹಾಯ ಲೆಕ್ಕಶೀರ್ಷಿಕೆಯಡಿಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರ ಶಿಫಾರಸ್ಸಿನ ಮೇರೆಗೆ ಜನತಾ ಬಜಾರ ಹಿರೇಕೆರೂರು ಇವರ ಮುಖಾಂತರ ಖರೀದಿಸಿ ಆಯ್ಕೆಯಾದ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಸರಬರಾಜು ಮಾಡಲಾಗಿದೆ. ಜಿಲ್ಲಾ ಕ್ರೀಡಾಂಗಣದಲ್ಲಿ ಆಗಮಿಸುವ ಕ್ರೀಡಾಪಟುಗಳ ದೈನಂದಿನ ಉಪಯೋಗಕ್ಕಾಗಿ ಕ್ರೀಡಾ ಸಾಮಾಗ್ರಿಗಳನ್ನು ಶ್ರೀಕಾಂತ ಸ್ಪೋರ್ಟ್ಸ್ ಹಾವೇರಿ ಇವರಿಂದ ಖರೀದಿಸಿ ದೈನಂದಿನ ತರಬೇತಿಗಾಗಿ ಉಪಯೋಗಿಸಲಾಗಿದೆ.	

...2

7	2014-15	ವಾಲಿಬಾಲ್, ಥ್ರೋಬಾಲ್, ಪುಟಬಾಲ್, ಹ್ಯಾಂಡ್‌ಬಾಲ್, ಹಾಕಿಬಾಲ್, ಡಿಸ್ಕಸ್‌ಥ್ರೋ, ಸ್ಕಿಪಿಂಗ್ ರೋಪ್, ಚೇಸ್ ಬೋರ್ಡ್, ಶಟಲ್ ಕಾಕ್‌ಬಾಕ್ಸ್	ರೂ1.20 ಲಕ್ಷ
8	2015-16	ವಾಲಿಬಾಲ್, ವಾಲಿಬಾಲ್ ನೆಟ್, ಹ್ಯಾಂಡ್‌ಬಾಲ್, ಥ್ರೋಬಾಲ್, ಥ್ರೋಬಾಲ್ ನೆಟ್, ಬಾಸ್ಕೆಟ್‌ಬಾಲ್, ಬಾಸ್ಕೇಟ್‌ಬಾಲ್ ನೆಟ್	ರೂ1.27 ಲಕ್ಷ
9	2016-17	ವಾಲಿಬಾಲ್, ವಾಲಿಬಾಲ್ ನೆಟ್, ಹ್ಯಾಂಡ್‌ಬಾಲ್, ಥ್ರೋಬಾಲ್, ಥ್ರೋಬಾಲ್ ನೆಟ್, ಬಾಸ್ಕೆಟ್‌ಬಾಲ್, ಬಾಸ್ಕೇಟ್‌ಬಾಲ್-ನಂ5,06,07	ರೂ1,99,500/-
		ಜಿಲ್ಲಾ ಕ್ರೀಡಾಂಗಣದಲ್ಲಿ ಆಗಮಿಸುವ ಕ್ರೀಡಾಪಟುಗಳ ದೈನಂದಿನ ಉಪಯೋಗಕ್ಕಾಗಿ ಕ್ರೀಡಾ ಸಾಮಾಗ್ರಿಗಳನ್ನು ಶ್ರೀಕಾಂತ ಸ್ಪೋರ್ಟ್ಸ್ ಹಾವೇರಿ ಇವರಿಂದ ಖರೀದಿಸಿ ದೈನಂದಿನ ತರಬೇತಿಗಾಗಿ ಉಪಯೋಗಿಸಲಾಗಿದೆ.	
10	2014-15	ವಾಲಿಬಾಲ್, ಥ್ರೋಬಾಲ್, ಪುಟಬಾಲ್, ಹಾಕಿಬಾಲ್, ಬಾಸ್ಕೇಟ್‌ಬಾಲ್	ರೂ.0.24 ಲಕ್ಷ
11	2015-16	ವಾಲಿಬಾಲ್, ಥ್ರೋಬಾಲ್, ಪುಟಬಾಲ್, ಹಾಕಿಬಾಲ್, ಬಾಸ್ಕೇಟ್‌ಬಾಲ್	ರೂ.0.20 ಲಕ್ಷ
12	2016-17	ವಾಲಿಬಾಲ್, ವಾಲಿಬಾಲ್ ನೆಟ್, ಥ್ರೋಬಾಲ್, ಥ್ರೋಬಾಲ್ ನೆಟ್, ಬಾಸ್ಕೇಟ್‌ಬಾಲ್, ಹ್ಯಾಂಡ್‌ಬಾಲ್, ಟಿ.ಟಿ ರಿಂಗ್, ಖೋ-ಖೋ ಪೋಲ್ಸ್	ರೂ99,855/-

(ಪ್ರಮೋದ್ ಮಧ್ವರಾಜ್)
ಮೀನುಗಾರಿಕೆ, ಯುವ ಸಬಲೀಕರಣ
ಹಾಗೂ ಕ್ರೀಡಾ ಸಚಿವರು.